ಪ್ರಗತಿ ಪರಿಶೀಲನಾ ಸಭೆಗೆ ಅಧಿಕಾರಿಗಳ ಹಾಜರಾತಿ

195 (303) ಶ್ರೀ ಪಾಟೀಲ್ ಎ.ಎಸ್.(ನಡಹಳ್ಳಿ) (ದೇವರ ಹಿಪ್ಪರಗಿ) : ಮಾನ್ಯ ಸಣ್ಣ ನೀರಾವರಿ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮತ ಕ್ಷೇತ್ರದ ಅಭಿವೃದ್ಧಿ ಪರಿಶೀಲನೆಗಾಗಿ ತಾಲ್ಲೂಕು ಮಟ್ಟದಲ್ಲಿ ಶಾಸಕರು ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ಕರೆಯಬಹುದೇ, ಈ ಬಗ್ಗೆ ಸರ್ಕಾರದ ಅಧಿಕೃತ ಆದೇಶ ಇರುವುದೆ, ಇದ್ದಲ್ಲಿ ಆದೇಶದ ಪ್ರತಿ ಒದಗಿಸುವುದು;

ಆ) ಈ ಸಭೆಯಲ್ಲಿ ತಾಲ್ಲೂಕು ಮಟ್ಟದ ಎಲ್ಲಾ ಇಲಾಖಾ ಅಧಿಕಾರಿಗಳು ತಹಶೀಲ್ದಾರ ಸಮೇತ ಕಡ್ಡಾಯವಾಗಿ ಹಾಜರಿರಲು ಸರ್ಕಾರ ಇಲಾಖೆಗಳಿಗೆ ನಿರ್ದೇಶನ ನೀಡಿ ಆದೇಶ ಹೊರಡಿಸಲಾಗಿದೆಯಾ;

ಇ) ದಿನಾಂಕ: 09.02.2010 ರಂದು ಬಸವನ ಬಾಗೇವಾಡಿ ಬಿಜಾಪುರ ಜಿಲ್ಲೆಯ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ತಹಶೀಲ್ದಾರರು ಅಧಿಕೃತವಾಗಿ ರಜೆ ತೆಗೆದುಕೊಳ್ಳದಿದ್ದರೂ ಕೂಡಾ ಸಭೆಗೆ ಗೈರು ಹಾಜರಾಗಿ ತಮ್ಮ ಪ್ರತಿನಿಧಿಗಳಿಗೂ ಸಭೆಗೆ ಕಳುಹಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಅತಿವೃಷ್ಟಿಯಿಂದ ನಲುಗುತ್ತಿರುವ ದೇವರ ಹಿಪ್ಪರಗಿ ಕ್ಷೇತ್ರದ ಪರಿಹಾರ ಕಾಮಗಾರಿ ಪ್ರಗತಿ ಪರಿಶೀಲನೆಗೆ ಸಂಬಂಧಪಟ್ಟ ಅಧಿಕಾರಿಗಳಾದ ತಹಶೀಲ್ದಾರರ ಗೈರು ಹಾಜರಾತಿಯಿಂದ ಅಭಿವೃದ್ಧಿಗೆ ಹಿನ್ನಡೆ ಯಾಗುವುದಿಲ್ಲವೆ;

ಉ) ಹಾಗಿದ್ದಲ್ಲಿ, ಅಭಿವೃದ್ಧಿಗೆ ಹಿನ್ನಡೆ ಮಾಡುತ್ತಿರುವ ಮತ್ತು ಸಭೆಗೆ ಹಾಜರಾಗದ ತಹಶೀಲ್ದಾರರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು) :

ಅ) ಹೌದು. ಶಾಸಕರು ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ಕರೆಯಬಹುದು. ಈ ಬಗ್ಗೆ ಸರ್ಕಾರದ ಅಧಿಕೃತ ಆದೇಶ ಇರುತ್ತದೆ. ಆದೇಶದ ಪ್ರತಿಯನ್ನು ಲಗತ್ತಿಸಿದೆ.

ಆ) ತಹಶೀಲ್ದಾರರು ಒಳಗೊಂಡಂತೆ ತಾಲ್ಲೂಕು ಮಟ್ಟದ ಎಲ್ಲಾ ಇಲಾಖಾಧಿಕಾರಿಗಳು ಸದರಿ ಸಭೆಗೆ ಹಾಜರಿರಲು ಸರ್ಕಾರದ ಆದೇಶದಲ್ಲಿ ಹಾಗೂ ಕಾಲ ಕಾಲಕ್ಕೆ ಸರ್ಕಾರ ನೀಡಿರುವ ಸುತ್ತೋಲೆಗಳಲ್ಲಿ ನಿರ್ದೇಶನ ಇರುತ್ತದೆ.

ಇ) ದಿನಾಂಕ: 9.2.2010 ರಂದು ತಹಶೀಲ್ದಾರ್, ಬಸವನ ಬಾಗೇವಾಡಿ ಇವರು ತುರ್ತು ಕೆಲಸದ ನಿಮಿತ್ತ ಕೇಂದ್ರ ಸ್ಥಾನವನ್ನು ಬಿಟ್ಟು ಹೋಗಬೇಕಾದ ಕಾರಣ ಒಂದು ದಿನ ಸಾಂದರ್ಭಿಕ ರಜೆ ಹಾಗೂ ಕೇಂದ್ರ ಸ್ಥಾನವನ್ನು ಬಿಟ್ಟಿರಲು ಅನುಮತಿ ಕೋರಿ ಉಪವಿಭಾಗಾಧಿಕಾರಿಗಳು, ಬಿಜಾಪುರ ಇವರ ಕಛೇರಿಗೆ ದಿನಾಂಕ: 8.2.2010 ರಂದು ಅಧಿಕೃತವಾಗಿ ರಜೆ ಚೀಟಿಯನ್ನು ನೀಡಿ ರಜೆಯ ಮೇಲೆ ತೆರಳಿಸುವುದರಿಂದ ಸದರಿ ದಿನಾಂಕದಂದು ನಡೆದ ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಭೆಗೆ ಗೈರು ಹಾಜರಾಗಿರುತ್ತಾರೆ. ಸಂಪರ್ಕ ಕೊರತೆಯಿಂದಾಗಿ ಅವರ ಪ್ರನಿಧಿಯು ಸದರಿ ಸಭೆಗೆ ಹಾಜರಾಗಿರುವುದಿಲ್ಲ. ಈ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹಾಗೂ ದಿನಾಂಕ: 8.2.10 ರಿಂದ ದಿನಾಂಕ: 11.2.10 ರವರೆಗೆ ಮೈಸೂರಿನಲ್ಲಿ ತರಬೇತಿ ಕಾರ್ಯಕ್ರಮಕ್ಕೆ ನಿಯೋಜಿಸಲ್ಪಟ್ಟಿದ್ದ ಬಿಜಾಪುರದ ಉಪವಿಭಾಗಾಧಿಕಾರಿಗಳು 15.2.10 ರಂದು ಸದರಿ ರಜೆಗೆ ಘಟನೋತ್ತರ ಮಂಜೂರಾತಿ ನೀಡಿರುತ್ತಾರೆ. ಜಿಲ್ಲಾಧಿಕಾರಿಗಳು, ಬಿಜಾಪುರ ಇವರು ವರದಿ ಮಾಡಿರುತ್ತಾರೆ.

ಈ) ಅತಿವೃಷ್ಟಿಯಿಂದ ಹಾನಿಗೀಡಾದ ಪ್ರದೇಶಗಳಲ್ಲಿ ಕೈಗೆತ್ತಿ ಕೊಳ್ಳಲಾದ ಪರಿಹಾರ ಕಾರ್ಯಗಳು ಅಂತಿಮ ಘಟಕ್ಕೆ ತಲುಪಿದ್ದು, ಪ್ರಸ್ತುತ ಸ್ಥಳಾಂತರಗೊಂಡ ಗ್ರಾಮಗಳಲ್ಲಿ ಮನೆ ನಿರ್ಮಾಣ ಕಾರ್ಯ ಮಾತ್ರ ದಾನಿಗಳಿಂದ ಪ್ರಾರಂಭವಾಗಬೇಕಾಗಿರುತ್ತದೆ. ತಹಶೀಲ್ದಾರರು ಅನಿವಾರ್ಯ ಕಾರಣದಿಂದ ರಜೆ ಪಡೆದು ಸಭೆಗೆ ಗೈರು ಹಾಜರಾಗಿರುತ್ತಾರೆ. ಆದಾಗ್ಯೂ ಪರಿಹಾರ ವಿತರಣೆಯಲ್ಲಿ ಯಾವುದೇ ವ್ಯತ್ಯಯ ಉಂಟಾಗದಂತೆ ಜಾಗ್ರತೆ ವಹಿಸಲಾಗಿದೆ, ಹಾಗೂ ಇನ್ನು ಮುಂದೆಯೂ ಸಹ ಜಾಗ್ರತೆ ವಹಿಸಲಾ ಗುವುದು ಎಂದು ಬಿಜಾಪುರ ಜಿಲ್ಲಾಧಿಕಾರಿಗಳು ವರದಿ ಮಾಡಿರುತ್ತಾರೆ.

ಉ) ತಹಶೀಲ್ದಾರರು ಬಸವನ ಬಾಗೇವಾಡಿ ಇವರು ಅಧಿಕೃತವಾಗಿ ರಜೆ ಚೀಟಿ ನೀಡಿ, ಉಪ ವಿಭಾಗಾಧಿಕಾರಿಗಳವರು ಮೌಖಿಕ ಅನುಮತಿ ಪಡೆದು ರಜೆಯ ಮೇಲೆ ತೆರಳಿರುವುದರಿಂದ ಅವರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳುವ ಅಗತ್ಯ ಇರುವುದಿಲ್ಲ ಎಂದು ಜಿಲ್ಲಾಧಿಕಾರಿಗಳು,

ಬಿಜಾಪುರ ಇವರು ವರದಿ ಮಾಡಿರುತ್ತಾರೆ. ಇನ್ನು ಮುಂದೆ ಇಂತಹ ಪ್ರಕರಣಗಳು ಮರುಕಳಿಸದಂತೆ ಸಂಬಂಧಪಟ್ಟವರಿಗೆ ಸೂಕ್ತ ಸೂಚನೆ ನೀಡಲಾಗುವುದು.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯಮಟ್ಟದ ಜಿಲ್ಲಾಮಟ್ಟದ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳನ್ನು ಪುನರ್ ರಚಿಸುವ ಬಗ್ಗೆ :

ಓದಲಾಗಿದೆ :

1. ಸರ್ಕಾರಿ ಆದೇಶ ಸಂಖ್ಯೆ:ಪಿಡಿ 212 ಪಿಎಂಎಂ 87, ದಿನಾಂಕ: 12.10.1987.
2. ಸರ್ಕಾರಿ ಆದೇಶ ಸಂಖ್ಯೆ:ಪಿಡಿ 37 ಸಿಇಪಿ 89, ದಿನಾಂಕ: 3.1.1990.
3. ಸರ್ಕಾರಿ ಆದೇಶ ಸಂಖ್ಯೆ:ಪಿಡಿ 34 ಸಿಇಪಿ 89, ದಿನಾಂಕ: 26.4.1990
4. ಸರ್ಕಾರಿ ಆದೇಶ ಸಂಖ್ಯೆ:ಪಿಡಿ 235 ಸಿಒಪಿ 93, ದಿನಾಂಕ: 21.2.1994
5. ಸರ್ಕಾರಿ ಆದೇಶ ಸಂಖ್ಯೆ:ಪಿಡಿ 309 ಪಿಟಿಪಿ 94, ದಿನಾಂಕ: 19.12.1994.

ಪ್ರಸ್ತಾವನೆ :

ಮೇಲೆ ಕ್ರಮಸಂಖ್ಯೆ (1) ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿ ಅನುಷ್ಠಾನದ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳನ್ನು ಪುನರ್ ರಚಿಸುವ ಬಗ್ಗೆ ಆದೇಶವನ್ನು ಹೊರಡಿಸಿತ್ತು. ಮೇಲೆ ಕ್ರಮಸಂಖ್ಯೆ (2) ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು